ಇ) ನವದೆಹಲಿಯಲ್ಲಿ ಅತಿಥಿ ಗೃಹ ಕಟ್ಟಿಸುವ ಆಲೋಚನೆ ಸರ್ಕಾರಕ್ಕೆ ಇರುವುದಿಲ್ಲ. ಬೆಂಗಳೂರಿನಲ್ಲಿ ಇನ್ನೊಂದು ಅತಿಥಿ ಗೃಹ ಕಟ್ಟಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ವಿವಿಧ ಇಲಾಖೆಗಳ ನೇಮಕಾತಿ ಸಮಿತಿಗಳು

160 (24)

ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ವಿವಿಧ ಇಲಾಖೆಗಳ ನೇಮಕಾತಿ ಸಮಿತಿಗಳನ್ನು ಸರ್ಕಾರವು ರಚಿಸಿರುವುದೇ (ಇಲಾಖಾವಾರು ಸಮಿತಿಗಳ ವಿವರ ನೀಡುವುದು)

2) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

3) ಈ ಸಮಿತಿಗಳನ್ನು ಯಾವ ದಿನಾಂಕದಂದು ರಚಿಸಲಾಗುವುದು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

1) ಇಲ್ಲ

2) ದಿನಾಂಕ 2-2-1990ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ I ಸೇವನೆ 90ರನ್ವಯ ಇಲಾಖಾ ನೇಮಕಾತಿ ಸಮಿತಿಗಳನ್ನು ರದ್ದು ಪಡಿಸಲಾಗಿದೆ.

3) - ಉದ್ಭವಿಸುವುದಿಲ್ಲ -

ಸಿಂಧನೂರು ತಾಲ್ಲೂಕಿನ ಹುಡಾಗ್ರಾಮದ ಏತ ನೀರಾವರಿ ಯೋಜನೆ.

161 (145)

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಿಂಧನೂರು ತಾಲ್ಲೂಕು ಹುಡಾ ಗ್ರಾಮದ ಏತ ನೀರಾವರಿ ಯೋಜನೆ ಯಾವ

ವರ್ಷ ಮಂಜೂರಾಗಿದೆ, ಮಂಜೂರಾದ ಹಣವೆಷ್ಟು? ಖರ್ಚಾಗಿರುವ ಹಣ ಎಷ್ಟು? ಈಗ ಕೆಲಸವು ಯಾವ ಹಂತದಲ್ಲಿದೆ?

2) ಸಿಂಧನೂರು ತಾಲ್ಲೂಕಿನ ಸಾಲಗುಂದಾ ಮತ್ತು ಮುಕ್ಕುಂದಾ ಗ್ರಾಮಗಳಿಗೆ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳು ಯಾವ ಹಂತದಲ್ಲಿದೆ; ಮಂಜೂರಾದ ಹಣವೆಷ್ಟು; ಇಲ್ಲಿಯವರೆಗೆ ಯೋಜನೆಗಳಿಗೆ ಖರ್ಚಾಗಿರುವ ಹಣವೆಷ್ಟು; ಕೆಲಸವು ಯಾವ ಹಂತದಲ್ಲಿದೆ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

1) 1995ರಲ್ಲಿ ಮಂಜೂರಾಗಿದೆ. ಮಂಜೂರಾದ ಹಣ ರೂ 99.85 ಲಕ್ಷ. ಫೆಬ್ರವರಿ 2000ದವರೆಗೆ ಆದ ವೆಚ್ಚ ರೂ.86.76 ಲಕ್ಷ. ಈಗ ಇನ್‌ಟೇಕ್ ವೆಲ್ ಛಾನಲ್ ಮತ್ತು ಪಂಪ್ ಹೌಸಿನ ಕಾಮಗಾರಿ ಪೂರ್ಣಗೊಂಡಿದ್ದು ರೈಜಿಂಗ್ ಮೇನ್ ಪೈಪುಗಳ ಜೋಡಣೆ ಕೆಲಸ ಶೇಕಡ 60ರಷ್ಟು ಮುಗಿದಿರುತ್ತದೆ.

2) ಸಿಂಧನೂರು ತಾಲ್ಲೂಕಿನ ಸಾಲಗುಂದಾ ಏತ ನೀರಾವರಿ ಯೋಜನೆ 1999-2000ನೇ ಸಾಲಿನಲ್ಲಿ ಸಾಂಕೇತಿಕ ಅನುದಾನವಿರುವುದರಿಂದ ಕಾಮಗಾರಿಯನ್ನು ಕೈಗತ್ತುಕೊಳ್ಳಲಾಗುವುದಿಲ್ಲ. ಮುಕ್ಕುಂದಾ ಏತ ನೀರಾವರಿ ಯೋಜನೆಯ ಅಂದಾಜು ಪಟ್ಟಿ ರೂ.29.99 ಲಕ್ಷಗಳಿಗೆ ಮಂಜೂರಾಗಿದ್ದು ಟೆಂಡರ್ ಕರೆಯುವ ಪ್ರಕ್ರಿಯೆಯಲ್ಲಿದೆ.

ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿ.

162 (146)

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗ ಭದ್ರಾ ಎಡದಂಡೆ ನಾಲೆಯ ಒಳಮೈ, ಹೊರಮೈ ದುರಸ್ತಿ ಕೆಲಸ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದರೆ ಈ ವರ್ಷ ಎಷ್ಟು ಹಣ ಈ ಕೆಲಸಕ್ಕೆ ನಿಗಧಿಪಡಿಸಲಾಗಿದೆ;

ಆ) ಸಿಂಧನೂರು ತಾಲ್ಲೂಕು ಎಡದಂಡೆ ನಾಲೆಯ ವ್ಯಾಪ್ತಿಯಲ್ಲಿ ಬರುವ ಉಪ ಕಾಲುವೆಗಳಾದ 31, 32, 36, 40, 54 ಉಪಕಾಲುವೆಗಳ ದುರಸ್ತಿ ಮಾಡಲು ಸರ್ಕಾರ ಯೋಜನೆ ಹಾಕಿದೆಯೇ?